ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/46/ವೃಬ/ಬಸ್ಥಾವಿ/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 30.01.2021

## ಜ್ಞಾಪನ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಬೆರಳಚ್ಚುಗಾರರಿಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬೆರಳಚ್ಚುಗಾರರ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಮಾಡುವ ಸಂಬಂಧದಲ್ಲಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ :
1. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1964 (1988 ರ ಡಿಸೆಂಬರ್ 31 ರ ವರೆಗೆ ತಿದ್ದುಪಡಿಯಾದಂತೆ ದಿನಾಂಕ: 26-09-1964 ರ ಸರ್ಕಾರದ ಅಧಿಸೂಚನೆ.
2. ಸರ್ಕಾರದ ದಿನಾಂಕ:03-03-1979ರ ಸಂಖ್ಯೆ:ಡಿಪಿಎಆರ್ 18 ಎಸ್‌ಸಿ ಆರ್ 79 ರ ಸುತ್ತೋಲೆ.
3. ಸರ್ಕಾರದ ಪತ್ರ ಸಂಖ್ಯೆ : ಇಡಿ 177 ಯುಇಸಿ 2018, ದಿನಾಂಕ : 08.05.2020.

** ** **

ಬೆರಳಚ್ಚುಗಾರರ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಹೊಂದಲು ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ ಹಾಗೂ ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿ ಈ ಬಗ್ಗೆ ಇಲಾಖಾ ಮುಖ್ಯಸ್ಥರು ವೃಂದ ಬದಲಾವಣೆ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ಉಲ್ಲೇಖ (3)ರಲ್ಲಿ ಬೆರಳಚ್ಚುಗಾರರ ವೃಂದದಿಂದ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ವೃಂದ ಬದಲಾವಣೆ ಮಾಡುವಾಗ ಜ್ಯೇಷ್ಠತೆಯ ಅನುಸಾರವೇ ವೃಂದ ಬದಲಾವಣೆಗೆ ಅವಕಾಶ ಕಲ್ಪಿಸಿಕೊಡುವಂತೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಇಲಾಖೆಯ ಬೆರಳಚ್ಚುಗಾರರಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಮಾಡುವಂತೆ ಕೋರಿ ಸ್ವೀಕೃತಗೊಂಡಿರುವ ಮನವಿಗಳನ್ನು ಪರಿಶೀಲಿಸಿ, ಉಲ್ಲೇಖ (3)ರಲ್ಲಿ ಸರ್ಕಾರವು ತಿಳಿಸಿರುವಂತೆ ಜ್ಯೇಷ್ಠತೆಯ ಆಧಾರದ ಮೇಲೆ ವೃಂದ ಬದಲಾವಣೆಗೆ ಅರ್ಹರಿರುವ ಬೆರಳಚ್ಚುಗಾರರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಈ ಕೆಳಕಂಡ ರಾಜ್ಯ ವ್ಯಾಪಿ ಮೂಲ ವೃಂದದ 31 ಹಾಗೂ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ 05 ಬೆರಳಚ್ಚುಗಾರರಿಗೆ ಅವರ ಕೋರಿಕೆ ಮೇರೆಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಮಾಡಲು ತೀರ್ಮಾನಿಸಲಾಗಿದೆ. ಅದರಂತೆ ***ದಿನಾಂಕ :08-02-2021 ರ ಪೂರ್ವಾಹ್ನ 11.00 ಗಂಟೆಗೆ*** **ಉನ್ನತ ಶಿಕ್ಷಣ ಸೌಧ, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560 001 (ಹೊಸ ಕಟ್ಟಡ)** ಇಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೃಂದ ಬದಲಾವಣೆಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು

ಕೌನ್ಸಿಲಿಂಗ್ ಏರ್ಪಡಿಸಲಾಗಿದೆ. ಸದರಿ ದಿನಾಂಕದಂದು ಸ್ಥಳ ಆಯ್ಕೆ ಕೌನ್ಸಿಲಿಂಗ್ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

*ಕೌನ್ಸಿಲಿಂಗ್ ಹಾಜರಾಗುವ ಸಂದರ್ಭದಲ್ಲಿ ದ್ವಿತೀಯ ದರ್ಜೆ ಬೆರಳಚ್ಚುಗಾರರುಗಳು ತಮ್ಮ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವ/ದಾಖಲಾಗದಿರುವ ಬಗ್ಗೆ ಸಂಬಂಧಪಟ್ಟ ಕಛೇರಿ/ಕಾಲೇಜಿನ ಮುಖ್ಯಸ್ಥರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರವನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.*

ಸ್ಥಳ ಆಯ್ಕೆ ಕೌನ್ಸಿಲಿಂಗ್‌ಗೆ ಹಾಜರಾಗಬೇಕಾಗಿರುವ ಅಭ್ಯರ್ಥಿಗಳ ವಿವರ ಕೆಳಕಂಡಂತಿದೆ.

## ರಾಜ್ಯವ್ಯಾಪಿ ಉಳಿಕೆ ಮೂಲವೃಂದ (ಆರ್.ಕೆ.)

| ಕ್ರ. ಸಂ. | ಜೇ.ಪ. ಕ್ರ.ಸಂ. | ಹೆಸರು (ಶ್ರೀ / ಶ್ರೀಮತಿ) | ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ/ ಕಾಲೇಜಿನ ಹೆಸರು |
|---|---|---|---|
| 1 | 2 | 3 | 4 |
| 1 | 179 | ಭಾರತಿ ಜಿ.ಸರ್ವದ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜನಗರ, ಹುಬ್ಬಳ್ಳಿ |
| 2 | 186 | ಭಾರತಿ ಎ ಹಲಗೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಕ್ಕೇರಿ |
| 3 | 193 | ಉಪ್ಪಿನ್ ಅಶ್ವಿನಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ |
| 4 | 196 | ಸಂಧ್ಯಾ.ಹೆಚ್.ಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ |
| 5 | 199 | ಶಾಂಭವಿ ಕುಮಾರಿ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಲ್ಮಠ |
| 6 | 200 | ವಿಜಯಶೆಟ್ಟಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟಪಡುಕೆರೆ, ಉಡುಪಿ ಜಿಲ್ಲೆ. |
| 7 | 202 | ಲತಾಶ್ರೀ.ಡಿ.ಪಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜವನಗೊಂಡನಹಳ್ಳಿ (ನಿಯೋಜನೆ–ಕೇಂದ್ರ ಕಛೇರಿ) |
| 8 | 204 | ಮಮತಾ.ಆರ್.ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ |
| 9 | 205 | ನಾಗವೇಣಮ್ಮ.ಕೆ.ವಿ | ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ |
| 10 | 208 | ಮಮತಾ ಭಟ್ಟ | ಪ್ರಾದೇಶಿಕ ಕಛೇರಿ, ಧಾರವಾಡ |
| 11 | 210 | ಶ್ವೇತಾ.ಎಸ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗೋಡಿ |
| 12 | 211 | ರವೀಂದ್ರ.ಪಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ |
| 13 | 212 | ಗಂಗಾ.ಕೆ | ಕೇಂದ್ರ ಕಛೇರಿ, ಬೆಂಗಳೂರು |
| 14 | 214 | ಶೋಭಾ.ಆರ್ | ಕೇಂದ್ರ ಕಛೇರಿ, ಬೆಂಗಳೂರು |

| 1 | 2 | 3 | 4 |
|---|---|---|---|
| 15 | 219 | ರಮ್ಯ ಹೆಚ್.ವಿ | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು |
| 16 | 220 | ನಳಿನಿ.ವಿ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು |
| 17 | 221 | ಯೋಗೇಶ್ವರಿ.ಹೆಚ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ |
| 18 | 228 | ಮದು.ಹೆಚ್.ಕೆ | ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ |
| 19 | 229 | ಲಕ್ಷ್ಮಿದೇವಿ ಜಿ | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು (ನಿಯೋಜನೆ-ಕೇಂದ್ರ ಕಛೇರಿ) |
| 20 | 231 | ಮುನಿರತ್ನ.ಬಿ.ಕೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ |
| 21 | 232 | ಲಕ್ಷ್ಮಿ.ಎನ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ |
| 22 | 233 | ಸೌಮ್ಯ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ |
| 23 | 235 | ರಮಾಪ್ರಭ.ಎನ್. | ಕೇಂದ್ರ ಕಛೇರಿ, ಬೆಂಗಳೂರು |
| 24 | 238 | ಧನಲಕ್ಷ್ಮಿ.ಕೆ.ಆರ್. | ಕೇಂದ್ರ ಕಛೇರಿ, ಬೆಂಗಳೂರು |
| 25 | 239 | ಸಂತೋಷ್ ಕುಮಾರ್.ಪಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು |
| 26 | 245 | ಸರಸ್ವತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ |
| 27 | 246 | ತನುಜಾಕ್ಷಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು |
| 28 | 248 | ಚಿತ್ರಶ್ರೀ.ಸಿ.ವಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು |
| 29 | 250 | ಕುಮಾರ್.ಟಿ.ಎನ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ |
| 30 | 251 | ಶ್ವೇತ.ಸಿ.ಜಿ | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು |
| 31 | 252 | ಕಾಳಮ್ಮ ಅರಕೇರಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಾದಗಿ |

## ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ (ಕೆ.ಕೆ.)

| ಕ್ರ. ಸಂ. | ಜೇ.ಪ. ಕ್ರ.ಸಂ. | ಹೆಸರು (ಶ್ರೀ / ಶ್ರೀಮತಿ) | ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ/ ಕಾಲೇಜಿನ ಹೆಸರು |
|---|---|---|---|
| 1 | 3 | 4 | 5 |
| 1 | 5 | ನೀಲಾಂಬಿಕಾ | ಸರ್ಕಾರಿ ಮಹಾವಿದ್ಯಾಲಯ, ಸಿಂಧನೂರು |
| 2 | 8 | ಮಂಜುಳಾ.ಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು |
| 3 | 9 | ಜಗದೇವಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್ |
| 4 | 10 | ಅಂಬಿಕಾ | ಪ್ರಾದೇಶಿಕ ಕಛೇರಿ, ಕಲಬುರಗಿ |
| 5 | 11 | ಕಲಾವತಿ | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಯಾದಗಿರಿ |

ಸೂಚನೆ : 1. ಒಂದು ಬಾರಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಬದಲಾವಣೆಗೆ ಅವಕಾಶವಿರುವುದಿಲ್ಲ.

2. ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳದೇ ಇದ್ದಲ್ಲಿ/ಗೈರು ಹಾಜರಾದಲ್ಲಿ ವೃಂದ ಬದಲಾವಣೆ ಹೊಂದಲು ಇಚ್ಛೆ ಇಲ್ಲವೆಂದು ಪರಿಗಣಿಸಲಾಗುವುದು.

3. ಸದರಿ ವೃಂದ ಬದಲಾವಣೆ ಅನುಮತಿಯನ್ನು ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಪರಿಗಣಿಸಬಹುದಾಗಿದ್ದು ಮತ್ತೊಮ್ಮೆ ಮನವಿಯನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

4. ಕೌನ್ಸಿಲಿಂಗ್‌ಗೆ ಹಾಜರಾಗುವ ಸಿಬ್ಬಂದಿಗಳಿಗೆ ದಿನಭತ್ಯೆ/ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.

5. ಕೌನ್ಸಿಲಿಂಗ್‌ಗೆ ಹಾಜರಾಗುವ ಸಿಬ್ಬಂದಿಗಳು ಕಡ್ಡಾಯವಾಗಿ ಮಾಸ್ಕ್ ಅನ್ನು ಧರಿಸತಕ್ಕದ್ದು ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳತಕ್ಕದ್ದು.

*(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

1/2/21

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ :

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಈ ಜ್ಞಾಪನದಲ್ಲಿ ತಿಳಿಸಿರುವ ಬೆರಳಚ್ಚುಗಾರರಿಗೆ – ಸೂಕ್ತ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಜ್ಞಾಪನವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.